**ಸಾಕ್ಷಿಯನ್ನು ದಿನಾಂಕಃ30 .10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 6 ನೇ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಕೀಲರಿಂದಃ**

1. ಈ ಕೇಸನ್ನು ಹಾಕುವಾಗ ವಕೀಲರಿಗೆ ಮಾಹಿತಿಯನ್ನು ಕೊಟ್ಟು ಬರೆಸಿ ಹಾಕಿದವರು ನನ್ನ ಅಕ್ಕ ರಮಾಮಣಿ. ನಮ್ಮ ಅಕ್ಕ ಏನು ಬರೆಸಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ತಾನು ಭಾಗಕ್ಕೆ ಕೇಸು ಹಾಕಿರುವುದಾಗಿ ನುಡಿದಿರುತ್ತಾರೆ. ಎ ಷೆಡ್ಯೂಲ್ ಮತ್ತು ಬಿ ಷೆಡ್ಯೂಲ್ ಆಸ್ತಿಗಳು ಯಾವು ಎಂದು ಹೇಳಲು ನಾನು ಓದಿಲ್ಲ. ಸುಬ್ರಮಣ್ಯ ಎನ್ನುವವರು ನನ್ನ ಚಿಕ್ಕಪ್ಪ. ಸಿದ್ದರಾಮೇಗೌಡ ಬಿನ್ ಮರಿಗೌಡ ನಮಗೆ ಅಣ್ಣ ತಮ್ಮಂದಿರಾಗಬೇಕು. ಅವರ ತಂದೆಯನ್ನು ನನ್ನ ತಾತ ಸಾಕಿಕೊಂಡಿದ್ದರು. ಶಾಂತಮ್ಮ ಯಾನೆ ಬಿಷಿಜಾ ಮತ್ತು ಬೇಬಿ ಎಂದರೆ ಬೇರೆ ಬೇರೆ ವ್ಯಕ್ತಿಗಳು. ದಾವಾ ಆಸ್ತಿಯಲ್ಲಿ ಸುಬ್ಬೇಗೌಡನ ಮಕ್ಕಳಿಗೆ ಭಾಗ ಇದೆ. 12 ನೇ ಪ್ರತಿವಾದಿ ಮರಿಗೌಡರ ಮಗ ಸಿದ್ದರಾಮೇಗೌಡರಿಗೆ ಆಸ್ತಿಯಲ್ಲಿ ಭಾಗದ ಹಕ್ಕು ಇದಿಯಾ ಎಂದು ನನಗೆ ಗೊತ್ತಿಲ್ಲ. ಅವರನ್ನು ಏಕೆ ಈ ದಾವೆಗೆ ಸೇರಿಸಿದ್ದೇವೆ ಎಂದರೆ ನಮಗೆ ನಮ್ಮ ತಂದೆಯ ಆಸ್ತಿಯಲ್ಲಿ ಅವರಿಂದ ನಷ್ಟ ಆಗಿರುವುದರಿಂದ ಸೇರಿಸಿದ್ದೇವೆ.

2. ನಾನು ತೊರೆಬೊಮ್ಮನಹಳ್ಳಿಯಲ್ಲಿ ವಾಸ ಇದ್ದೇನೆ. ಸೋಮನಹಳ್ಳಿ ಮತ್ತು ತೊರಬೊಮ್ಮನಹಳ್ಳಿಗೆ ಸುಮಾರು 15 ರಿಂದ 20 ಮೈಲಿ ಅಂತರ ಇದೆ ಎಂದರೆ 4-5 ಮೈಲಿ

ಅಂತರ ಇರುತ್ತದೆ. ನಮ್ಮ ತಂದೆ 25 – 30 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನಮ್ಮ ತಾಯಿ ಮೃತಪಟ್ಟು 5 ವರ್ಷಗಳಾಗಿವೆ. ನನ್ನ ಮದುವೆಯಾಗಿ ಎಷ್ಟು ವರ್ಷಗಳಾಗಿವೆ ಎಂದು ಹೇಳಲು ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತುನ್ನು ಎಷ್ಟು ವರ್ಷಗಳ ಹಿಂದೆ ಕೊನೆಯದಾಗಿ ನೋಡಿದ್ದೆ ಎಂದರೆ ಈಗಲೂ ನಾನು ದಾವಾ ಸ್ವತ್ತುಗಳನ್ನು ಮಾಡುತ್ತಿದ್ದೇನೆ. ನಾನು ಮದುವೆಯಾಗಿ ಹೋದ ಮೇಲೆ ನಾನು ದಾವಾ ಸ್ವತ್ತುಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ.

3. ನನ್ನ ತಾಯಿ ಬದುಕಿದ್ದಾಗ 1 ನೇ ಪ್ರತಿವಾದಿಯ ಮೇಲೆ ಒಂದು ಕೇಸನ್ನು ಹಾಕಿದ್ದರು ಎಂದರೆ, 1 ನೇ ಪ್ರತಿವಾದಿಯೇ ನನ್ನ ತಾಯಿಯ ಮೇಲೆ ಹಾಕಿದ್ದರು. ಅದರಲ್ಲಿ ನಾನು ಹಾಗೂ ನನ್ನ ಅಕ್ಕ ನನ್ನ ತಾಯಿಯ ಪರವಾಗಿ ಸಾಕ್ಷಿ ಹೇಳಿದ್ದು, ಆ ದಾವೆಯ ಆಸ್ತಿಯನ್ನು ನನ್ನ ತಾಯಿಯ ಅಜ್ಜುಪಾಲಿಗೆ ಬಿಟ್ಟಿದ್ದಾಗಿ ಸಾಕ್ಷ್ಯ ನುಡಿದಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ ಅವರ ಆಸ್ತಿಯನ್ನು ನನ್ನ ಅಕ್ಕ, ನನ್ನ ಮತ್ತು ನನ್ನ ಅಣ್ಣನ ನಡುವೆ ಭಾಗ ಮಾಡಿದ್ದಾರೆ ಎಂದರೆ ನನ್ನ ಅಕ್ಕನಿಗೆ ಭಾಗ ಕೊಟ್ಟಿದ್ದು ನನಗೆ ಕೊಟ್ಟಿಲ್ಲ. ನನ್ನ ಅಕ್ಕನಿಗೆ ವಿಭಾಗದಲ್ಲಿ ಸರ್ವೆ ನಂಬರ್ 44/2–ಪಿ1 ರಲ್ಲಿ 20 ಗುಂಟೆ ಜಮೀನನ್ನು ನನ್ನ ತಂದೆ ಕೊಟ್ಟಿದ್ದಾರೆ ಎಂದರೆ ಸರಿ. ಆ ವಿಭಾಗ ಮಾಡಿದಾಗ ನಾನು ಇದ್ದೆ ಎಂದರೆ, ನಾನು ಚಿಕ್ಕವಳಾಗಿದ್ದೆ. ಆ ವಿಭಾಗವಾದಾಗ ನನಗೆ ಮದುವೆ ಆಗಿದ್ದು, ನಾನು ಚಿಕ್ಕವಳಾಗಿರಲಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನಗೆ ಹಣ ಮತ್ತು ಚಿನ್ನ

ಕೊಟ್ಟಿದ್ದರಿಂದ ನನಗೆ ಜಮೀನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನಿಗೆ 20 ಗುಂಟೆ ಜಮೀನನ್ನು ಕೊಟ್ಟು ಉಳಿದ ಜಮೀನನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ, 1 ನೇ ಪ್ರತಿವಾದಿ ಆಸ್ತಿಯನ್ನು ಬರೆಸಿಕೊಂಡು ನನ್ನ ತಾಯಿಯನ್ನು ನೋಡಿಕೊಳ್ಳದೇ ಮನೆಯಿಂದ ಹೊರಗೆ ಹಾಕಿದ್ದರು. 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಸಾಕ್ಷಿಯು ಮುಂದುವರಿದು 1 ನೇ ಪ್ರತಿವಾದಿಯು ಅವರ ಮಕ್ಕಳ ಹೆಸರಿಗೆ ತನ್ನ ತಾಯಿಯಿಂದ ಆಸ್ತಿಯನ್ನು ಬರೆಸಿಕೊಂಡು ತನ್ನ ತಾಯಿಗೆ ಊಟ ಹಾಕದೇ ಮನೆಯಿಂದ ಹೊರಗೆ ಹಾಕಿದ್ದರು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ಕೊಟ್ಟ ಆಸ್ತಿಗಳನ್ನು ಅವರು ಮತ್ತು ಅವರ ಮಕ್ಕಳ ನಡುವೆ 1998 ನೇ ಇಸವಿಯಲ್ಲಿ ಪುನಃ ಭಾಗ ಮಾಡಿಕೊಂಡಿದ್ದಾರೆ ಎಂದರೆ ನನ್ನ ತಂದೆಯ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಕೊಟ್ಟಿಲ್ಲ, ನನಗೆ ಭಾಗ ಬರಬೇಕೆಂದು ಕೇಸು ಹಾಕಿದ್ದೇನೆ. 1 ನೇ ಪ್ರತಿವಾದಿಗೆ ಕೊಟ್ಟಿದ್ದ ಆಸ್ತಿಗಳನ್ನು ಎಂ ಆರ್ ನಂಬರ್ 22/1998-99 ರ ಪ್ರಕಾರ ಅವರ ಮಕ್ಕಳು ಮತ್ತು ಅವರ ನಡುವೆ ವಿಭಾಗ ಆಗಿ ಖಾತೆ ಆಗಿದೆ ಎಂದರೆ ಸರಿಯಲ್ಲ. ಇವತ್ತಿಗೂ ಕೂಡ ಕೌಡ್ಲೆಯಲ್ಲಿರುವ ಆಸ್ತಿಗಳು 1 ನೇ ಪ್ರತಿವಾದಿಯ ಮಕ್ಕಳ ಹೆಸರಿನಲ್ಲಿ ಇದೆ ಎಂದರೆ ನಾನು ಯಾವುದೇ ವಿಭಾಗಕ್ಕೆ ಸಹಿ ಹಾಕಿರುವುದಿಲ್ಲ, ಅವರ ಹೆಸರಿಗೆ ಹೋಗಿರುವುದು ಸರಿಯಲ್ಲ. ಸೋಮನಹಳ್ಳಿಯಲ್ಲಿರುವ ಜಮೀನುಗಳು 1 ನೇ ಪ್ರತಿವಾದಿಯ ಭಾಗಕ್ಕೆ ಹೋಗಿವೆ ಎಂದರೆ ಅವುಗಳು ನನ್ನ ತಂದೆಯ ಆಸ್ತಿಗಳಾಗಿದ್ದು

ಅದರಲ್ಲಿ ನನಗೆ ಭಾಗ ಇದೆ. ಈಗಾಗಲೇ ನಮ್ಮ ಕುಟುಂಬದಲ್ಲಿ ಭಾಗ ಆಗಿರುವುದರಿಂದ ಪುನಃ ಭಾಗ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ನನಗೆ ಯಾವುದೇ ಭಾಗ ಕೊಟ್ಟಿಲ್ಲ.

4. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಅಕ್ಕನಿಗೆ ಒಬ್ಬಳಿಗೆ ಭಾಗ ಕೊಟ್ಟಿದ್ದು, ನನಗೆ ಕೊಟ್ಟಿಲ್ಲ ಎಂದು ಬರೆಸಿ ಹಾಕಿಲ್ಲ. ನಾನು ಮತ್ತು ನನ್ನ ಅಕ್ಕ ಮೊದಲು ಚೆನ್ನಾಗಿ ಇದ್ದೆವು, ಈಗ 1 ನೇ ಪ್ರತಿವಾದಿ ಮತ್ತು ಅವರ ನಡುವೆ ಏನು ನಡೆದಿದೆ ಗೊತ್ತಿಲ್ಲ, ನನಗೆ ಭಾಗ ಬೇಕು. ಕುಟುಂಬದ ವ್ಯವಹಾರಗಳನ್ನು ಹೇಳಿ ನನ್ನ ಅಕ್ಕ ಮತ್ತು 1 ನೇ ಪ್ರತಿವಾದಿ ರಾಜಿ ಮಾಡಿಕೊಂಡಿದ್ದಾರೆ ಎಂದರೆ, ಅದು ನನಗೆ ಗೊತ್ತಿಲ್ಲ ನನಗೆ ಭಾಗ ಬರಬೇಕು. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗಾಂಶ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

**1 ನೇ** ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**,**
ಮದ್ದೂರು.